

■ ಕೆ. ಅರವಿಂದ ಮಿತ್ರ

# ಇಂದ್ರಾಮಾಲ್

ಮೈಸೂರಿಗೆ ಅಂಟಿಕೊಂಡಂತೆಯೂ ಬಿಟ್ಟುಕೊಂಡಂತೆಯೂ ಇರುವ ಭವ್ಯ ಇಂದ್ರಾಮಾಲ್ ತಲೆ ಎತ್ತಿ ವರ್ಷ ಒಂದಾಗಿದೆ. ಮೈಸೂರು, ಬೆಂಗಳೂರು ಹೆದ್ದಾರಿಯಲ್ಲೇ ಇರುವುದರಿಂದ ಅತ್ತ ನಾಗರಹೊಳೆ, ಮಡಿಕೇರಿಯ ರೆಸಾರ್ಟ್‌ಗಳು, ಇತ್ತ ಬಂಡೀಪುರ, ಬಿಳಿಗಿರಿರಂಗನ ಬೆಟ್ಟಗಳ ಕಡೆಗೆ ವಾರಾಂತ್ಯ ಪ್ರವಾಸ ನಿಮಿತ್ತ ಯಾರು ಬೆಂಗಳೂರು ಮಹಾನಗರದ ಕಡೆಯಿಂದ ಬಂದರೂ ಇಂದ್ರಾಮಾಲನ್ನು ಕಣ್ಣು ತುಂಬಿಸಿಕೊಂಡು ಹೋಗುವರು. ಅದು ಉದ್ಘಾಟನೆಯಾದದ್ದು ರಾಜ್ಯದ ಮುಖ್ಯಮಂತ್ರಿಗಳಿಂದಲೆ!

ಈಗ ಕಥೆ ಇರುವುದು ಮಾಲಿನ ವೈಭವ ಕುರಿತಾದದ್ದು ಎಂಬುದಕ್ಕಿಂತ ಅದಕ್ಕೆ ಅಂಟಿಕೊಂಡಂತೆ ಇದ್ದ ಮುರಟಿಕ್ಯಾತನಪುರದ ಅಳಿದುಳಿದ ಸಂಸಾರಗಳದು. ಕ್ಯಾತನಪುರದ ಫಾಸಲೆಯ ಆರೇಳು ಮೈಲಿ ದೂರದಲ್ಲಿ ಇರಸವಾಡಿ, ಹೋಳುಂಡಿ, ಕುರಿದೊಡ್ಡಿ, ತಾವರೆಕೆರೆ ಗ್ರಾಮಗಳು ಇವೆಯಾದರೂ ಇಂದ್ರಾಮಾಲ್ ಏಳುವಲ್ಲಿ ಹೆಚ್ಚು ಭಂಗ ತಟ್ಟಿದ್ದು ಮುರಟಿಕ್ಯಾತನಪುರದವರಿಗೇ. ಇಷ್ಟರ ಮೇಲೆ ಆ ಗ್ರಾಮದವರು ಮಾಲ್ ಏಳುವ ಮುನ್ನ ನಾಲ್ಕೈದು ವರ್ಷಗಳಿಂದ ಮಳೆ, ಬೆಳೆ ಕಾಣದೆ ಊರೊಳಗಿನ ಮುಕ್ಕಾಲು ಪಾಲು ಜನ ಸಂಸಾರ ಸಮೇತ ಕೊಡಗು, ಊಟಿಯ ಕಾಫಿ ತೋಟವಲ್ಲದೆ, ಉಳಿದರ್ಧ ಬೆಂಗಳೂರು ಸೇರಿಕೊಂಡರು.

ಮಾಲು ಎದ್ದು ಅದಕ್ಕೊಂದು ಸರಹದ್ದೇ ಇಲ್ಲದ ವಿಸ್ತಾರ ಕಾಂಪೌಂಡ್ ಹಾಕಬೇಕೆಂದಾಗ ಗದ್ದಲ ಹಚ್ಚಿದವನು ಅಲ್ಲೇ ಟೈಲರಿಂಗ್ ಮಾಡಿ ಜೀವ ಹಿಡಿದುಕೊಂಡಿದ್ದ ರಾಮಯ್ಯ. ಅವನೊಂದಿಗೆ ಸೇರಿಕೊಂಡವರು ಅದೇ ಊರಾಚೆಯ ಆಂಜನೇಯನಿಗೆ ಭಕ್ತರೇ ಇಲ್ಲದೆ ಚಿಂತೆಗೆ ಬಿದ್ದಿದ್ದ ವೆಂಕಟರಮಣಯ್ಯನವರು. ಈ ಪೂಜಾರಪ್ಪನ ಸಂಸಾರ ಹೆಂಡತಿ, ಮಗ